ಶ್ರೀ ಡಿ. ಎಂ. ಗೋವಿಂದರಾಜು.—ಒಡೆದು ಹೋಗಿರುವುದನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ರಿಪೇರಿ ಮಾಡುವುದು ಲಾಭದಾಯಕವಲ್ಲ. ಆದ್ದರಿಂದ ಹೆಚ್ಚು ಪ್ರಯೋಜನ ದೊರೆಯುವುದಿಲ್ಲ ಎಂಬ ಅಭಿಪ್ರಾಯ ಇದೆ.

ಶ್ರೀ ಡಿ. ಎಂ. ಗೋವಿಂದರಾಜು.—ಕೆರೆ ಕಟ್ಟುವುದೇ ಕಷ್ಟ. ಕಟ್ಟಿದ ಕೆರೆಯನ್ನು ರಿಪೇರಿ ಮಾಡುವುದಕ್ಕೆ ಕಷ್ಟವೇ, ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪ.—ಒಡೆದು ಹೋದ ಎಲ್ಲ ಕೆರೆಗಳನ್ನೂ ರಿಪೇರಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಎಷ್ಟು ಸಾವಿರ ರೂಪಾಯಿಗಳ ಅಂದಾಜಾಗಿದೆ, ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪ.—25 ಸಾವಿರ ರೂಪಾಯಿ ಅಂದಾಜಾಗಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಅಚ್ಚುಕಟ್ಟು ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—38 ಎಕರೆ.

ಶ್ರೀ ಡಿ. ಎಂ. ಗೋವಿಂದರಾಜು.—ಅದು ಲಾಭದಾಯಕವಾಗುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಆಗುವುದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಜನರಿಗೆ ಬಹಳ ತೊಂದರೆ ಆಗಿದೆ; ಆದಷ್ಟು ಜಾಗ್ರತೆ ಇದನ್ನು ಮುಂಜೂರು ಮಾಡಿ ರಿಪೇರಿ ಮಾಡಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಉತ್ತರ ಆಗಲೇ ಹೇಳಿದ್ದೇನೆ.

Tank Construction (Motakadahalli Tank).

Q.—145. **Sri H. T. PUTTAPPA** (Hoskote-Anekal—Scheduled Castes).—

Will the Government be pleased to state :—

(*a*) the reason for not taking up the construction work of "Motakadahalli" tank of Nandagudi Hobli, Hoskote Taluk even though an assurance was given by them some time ago in that behalf;

(*b*) whether they are aware of the fact that the residents of four or six surrounding villages will be fully benefited by the construction of the said tank;

(*c*) whether they intend to commence the work of constructing the tank this year as per the assurance given?

A.—**Sri Kadidal MANJAPPA** (Minister for Revenue and Public Works).—

(*a*) Prohibitive cost and poor return. It is not clear to what kind of assurance the latter part of the question refers.

(*b*) The atchkat of the proposed tank will be only in one village, *viz.*, Motakadahalli.

(*c*) Does not arise in view of answer to (*a*).

ಶ್ರೀ ಎಚ್. ಟಿ. ಪುಟ್ಟಪ್ಪ.—ಈ ಕೆರೆಯ ಅಚ್ಚುಕಟ್ಟಿಗೆ ಇನ್ನೂ ಎಷ್ಟು ಎಕರೆ ಜಮೀನು ಸೇರಿದರೆ ಈ ಕೆರೆ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಉಪಾಧ್ಯಕ್ಷರು.—ದೊಡ್ಡ ಕೆರೆಗೆ ಜಾಸ್ತಿ ಅಚ್ಚುಕಟ್ಟು ಬೇಕು, ಚಿಕ್ಕ ಕೆರೆಗೆ ಕಡಮೆ ಅಚ್ಚುಕಟ್ಟು ಬೇಕು, ಅಷ್ಟೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ನನ್ನ ಪ್ರಶ್ನೆ ಈ ಕೆರೆ ಕಟ್ಟಬೇಕಾದರೆ ಎಷ್ಟು ಅಚ್ಚುಕಟ್ಟು ಆಗಬೇಕು ಎಂದು.

(ಉತ್ತರವಿಲ್ಲ.)

Thunga Channels (Completion).

Q.—268. **Sri H. S. RUDRAPPA** (Honnali).—

Will the Government be pleased to state :—

(*a*) the length of the Thunga Channels constructed so far;

(*b*) the average number of coolies that are working in the construction of the above channels;

(*c*) the average number of coolies working in the Honnali Taluk area;

(*d*) out of them, how many coolies are natives of Honnali Taluk;

(*e*) the probable time required for the completion of the above channel works?

A.—**Sri Kadidal MANJAPPA** (Minister for Revenue and Public Works).—

A.—(*a*) 31 miles—0 to 25 of Left Bank Channel, 0 to 6 of Right Bank Channel.

(*b*) About 5,000 per day.

(*c*) About 2,500 per day.

(*d*) About 1,800.

(*e*) The channels are programmed to be completed by June 1956.

Sri H. S. RUDRAPPA.—Were not the Thunga channels scheduled to be completed one year hence, Sir?

Sri Kadidal MANJAPPA.—This is the latest report I have received.

Sri H. S. RUDRAPPA.—May I know the proper reasons for the delay in completion of these channels ?

Sri Kadidal MANJAPPA.—There is no delay. In fact we are going to finish the work before the scheduled date.

Sri H. S. RUDRAPPA.—Shall I bring it to notice that the same Hon'ble Minister said last time that the Channels will be completed by June 1955 ?

Sri Kadidal MANJAPPA.—I do not remember.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೊರಗಡೆಯ ವರೇ ಹೆಚ್ಚು ಜನ ಕಂಟ್ರಾಕ್ಟರುಗಳಿದ್ದಾರೆ, ಮೈಸೂರು ದೇಶದವರಿಗೆ ಕಂಟ್ರಾಕ್ಟ್ ಸಿಕ್ಕುವುದಿಲ್ಲ ಎಂಬುದು ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ಮೈಸೂರಿನವರು ಹೆಚ್ಚಾಗಿ ಕೆಲಸಕ್ಕೆ ಬರುವುದಿಲ್ಲ ಎಂದು ಗೊತ್ತಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಭಾರಿ ಕಂಟ್ರಾಕ್ಟರುಗಳಿಗೇ ಅವಕಾಶ ಸಿಕ್ಕಿ ಬಾಕಿಯವರಿಗೆ ಸಿಕ್ಕದಿರುವುದು ನೂಕ್ತವಲ್ಲ, ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಬೇಕಾದಷ್ಟು ಕೂಲಿಯವರನ್ನಿಟ್ಟುಕೊಂಡಿರುತ್ತಾರೆ. ಆದ್ದರಿಂದ ಅವರಿಗೆ ಕೆಲಸ ಕೊಡಬೇಕಾಗುತ್ತದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೊರಗಿನವರು ಬಂದು ಹೆಚ್ಚು ಕೂಲಿ ಕೊಟ್ಟು ಮೈಸೂರಿನ ಕಂಟ್ರಾಕ್ಟರ ಹತ್ತಿರ ಕೆಲಸ ಮಾಡುತ್ತಿದ್ದ ಕೂಲಿಗಳನ್ನು ಬಿಡಿಸುತ್ತಿದ್ದಾರೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಒಬ್ಬಿಬ್ಬರು ಆ ರೀತಿ ದೂರು ಹೇಳಿದರು. ಅದನ್ನು ತಪ್ಪಿಸುವುದು ಹೇಗೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತುಂಗಭದ್ರ ಅಣೆಕಟ್ಟಿನ ಬಳಿ ಈ ರೀತಿ ನಡೆಯುತ್ತಿರುವುದನ್ನು ತಪ್ಪಿಸಲು ಕಾನೂನು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ನಿಯಮ ಮಾಡಲು ಸಾಧ್ಯವಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಕೆಲಸಗಳೆಲ್ಲಾ ದೊಡ್ಡ ಕಂಟ್ರಾಕ್ಟರುಗಳಿಗೇ ಸಿಕ್ಕುತ್ತಿರುವುದನ್ನು ತಪ್ಪಿಸಿ ಸಣ್ಣ ಕಂಟ್ರಾಕ್ಟರುಗಳಿಗೂ ಕೆಲಸ ಸಿಕ್ಕುವ ಹಾಗೆ ಮಾಡಲಾಗುವುದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೇನು ಮಾಡಬೇಕು ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಕಂಟ್ರಾಕ್ಟರುಗಳ ಘನತೆ ಗೌರವಗಳಿಗೆ ತಕ್ಕಹಾಗೆ ಸಣ್ಣ ಕಂಟ್ರಾಕ್ಟರುಗಳಿಗೆ 5 ಸಾವಿರ ರೂಪಾಯಿಗಳೊಳಗಿರುವ ಕೆಲಸ, ದೊಡ್ಡ ಕಂಟ್ರಾಕ್ಟರುಗಳಿಗೆ 20 ಸಾವಿರ ರೂಪಾಯಿಗಳ ಮತ್ತು ಅದಕ್ಕೆ ಮೇಲ್ಪಟ್ಟ ಕೆಲಸ ಕೊಡಲು ಡಿವಿಜ಼್ ಮಾಡಿರುವಂತೆ ಏಕೆ ಮಾಡಬಾರದು ?

Sri Kadidal MANJAPPA.—That is not practicable.

Tungabhadra Project Development of Irrigation Area.

Q.—340. **Sri Ijari SIRASAPPA** (Harapanahalli).—

Will the Government be pleased to state :—

(*a*) the development scheme of irrigation area under the Tungabhadra project ;

(*b*) the measures adopted to expedite the schemes to achieve the maximum benefit out of the project ?

A.—**Sri Kadidal MANJAPPA** (Minister for Revenue and Public Works).—

(*a*) The best and quickest mode of developing irrigation under the project is under consideration.

(*b*) A Special Irrigation Division has been constituted to attend to the work. The nature and extent of the facilities to be afforded to the ryots in the irrigable area have been investigated by an expert team deputed by the Planning Commission and the matter will be examined further on the receipt of the team's recommendations. A proposal to have a Special Committee for the area on the lines of the Visvesvaraya Canal Area Board is also under consideration.

ಶ್ರೀ ಇಜಾರಿ ಸಿರಸಪ್ಪ.—ಈ ಜಲಾಶಯದ ಕೆಳಗೆ ನೀರಾವರಿಯಾಗುವ ಜಮೀನಿನ ವಿಸ್ತೀರ್ಣವೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಮದ್ರಾಸು ಸರ್ಕಾರದವರು ನಮಗೆ ಕೊಟ್ಟಿರತಕ್ಕ ಅಂಕಿ ಅಂಶಗಳ ಆಧಾರದಮೇರೆ ಸುಮಾರು 92,981 ಎಕರೆಗಳು.

ಶ್ರೀ ಇಜಾರಿ ಸಿರಸಪ್ಪ.—ಈಗ ನೀರು ಬಂದಿರುವ ಜಮೀನೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು 500 ಎಕರೆಗಳಿರಬಹುದು.

ಶ್ರೀ ಇಜಾರಿ ಸಿರಸಪ್ಪ.—ಈಗ ಕಾಲುವೆಯಿಂದ ನೀರುಬಿಟ್ಟು ಒಂದು ವರ್ಷವಾಯಿತಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಗೊತ್ತಿಲ್ಲ.

ಶ್ರೀ ಇಜಾರಿ ಸಿರಸಪ್ಪ.—ತುಂಗಭದ್ರಾ ಕಾಲುವೆ ಎಡಭಾಗದಲ್ಲಿ ಮಾತ್ರ ನೀರು ಕೊಡಲು ಸಾಧ್ಯ, ಬಲ ಭಾಗದಲ್ಲಿ ಸಾಧ್ಯವಿಲ್ಲ ಎಂದು ಹೇಳುವುದೇಕೆ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಇಂಥಿಂಥ ಜಮೀನಿಗೇ ನೀರು ಕೊಡಬೇಕು ಎಂದು ನಿರ್ಧಾರವಾಗಿದೆ. ನಾವು ಟೆಕ್ನಿಕಲ್ ಒಪೀನಿಯನ್ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ.

ಶ್ರೀ ಇಜಾರಿ ಸಿರಸಪ್ಪ.—ಎಡಗಡೆಗೆ ಮಾತ್ರ ನೀರು ಕೊಡಲು ಸಾಧ್ಯ, ಬಲಗಡೆಗೆ ಸಾಧ್ಯವಿಲ್ಲವೆಂದು ಹೇಳುವುದನ್ನು ಈಗಿರುವ ರೈತರಿಗೂ ಅನ್ಯಾಯವಾಗಬಹುದೆ ?